ಓ.ಎಸ್.ನಂ.**80/2012**
ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **09.06.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ಎಂ.ಎಂ. ವಕೀಲರಿಂದ**

ವಾದಿಯು ದಾವೆಯಲ್ಲಿ ಏನು ಪರಿಹಾರ ಕೇಳಿದ್ದಾರೆಂದರೆ ಗೊತ್ತಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಏನು ಬರೆಸಿದ್ದೇನೆಂದು ಗೊತ್ತಿಲ್ಲ. ಪ್ರಮಾಣಪತ್ತದಲ್ಲಿ ಬರೆದಿರುವ ವಿಚಾರ ಅಷ್ಟಾಗಿ ಗೊತ್ತಿಲ್ಲ. ವಾದಿಯ ತಂದೆ ನಾರಾಯಣಪ್ಪನವರಿಗೆ ಇಬ್ಬರು ಹೆಂಡತಿಯರು ಎಂದರೆ ಗೊತ್ತಿಲ್ಲ, ಆದರೆ ಇಬ್ಬರು ಹೆಂಡತಿಯರು ಇದ್ದರು ಎಂದು ಹೇಳಿರುವುದನ್ನು ನಾನು ಕೇಳಿದ್ದೇನೆ. ನಾರಾಯಣಪ್ಪನವರ ಹೆಂಡತಿಯವರ ಹೆಸರು ಮುನಿಯಲ್ಲಮ್ಮ ಮತ್ತು ಮುನಿಲಕ್ಷ್ಮಮ್ಮ ಎಂದರೆ ಗೊತ್ತಿಲ್ಲ. ನಾರಾಯಣಪ್ಪ ಮತ್ತು ಮುನಿಯಲ್ಲಮ್ಮನಿಗೆ ಮಾದಪ್ಪ ಎಂಬ ಮಗನಿದ್ದನು ಎಂದರೆ ಸರಿ. ಅದೇರೀತಿ ನಾರಾಯಣಪ್ಪ ಮತ್ತು ಮುನಿಲಕ್ಷ್ಮಮ್ಮನಿಗೆ ಅಶ್ವತಮ್ಮ ಎಂಬ ಮಗಳಿದ್ದಳು ಎಂದರೆ ಗೊತ್ತಿಲ್ಲ.

ನಾರಾಯಣಪ್ಪನವರು ಬದುಕಿರುವಾಗ ಅವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದ ನಾನು ಕೇಳಿ ತಿಳಿದುಕೊಂಡಿದ್ದೇನೆ. ನಾರಾಯಣಪ್ಪನವರು ಮೃತಪಡುವ ತನಕ ಮುನಿಲಕ್ಷ್ಮಮ್ಮನವರು ಆರೈಕೆಯಲ್ಲಿ ಇದ್ದರು ಎಂದರೆ ಗೊತ್ತಿಲ್ಲ. ನಾರಾಯಣಪ್ಪನವರ ಸರ್ವಿಸ್ ರೆಕಾರ್ಡ್ ನಲ್ಲಿ ಹೆಂಡತಿ ಹೆಸರು ಮುನಿಲಕ್ಷ್ಮಮ್ಮ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ಬರೆಸಿಕೊಂಡಿರಬಹುದು ಹೇಳುತ್ತಾರೆ. ನಾರಾಯಣಪ್ಪನವರು ಮೃತಪಟ್ಟ ನಂತರ ಮುನಿಲಕ್ಷ್ಮಮ್ಮನವರಿಗೆ ಗಂಡನ ಪಿಂಚಣಿ ಬರುತ್ತಿತ್ತು ಎಂದರೆ ಇರಬಹುದು, ನನಗೆ ಗೊತ್ತಿಲ್ಲ.

ನಾರಾಯಣಪ್ಪನವರ ಮಗ ಮಾದಪ್ಪನವರು ಸಿದ್ದಮ್ಮಳನ್ನು ಮದುವೆಯಾಗಿದ್ದರು. ಮಾದಪ್ಪ ಮತ್ತು ಸಿದ್ದಮ್ಮನವರು ಮೃತಪಟ್ಟಿದ್ದಾರೆಂದರೆ ಸರಿ.

ಸದರಿಯವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ಮಾದಪ್ಪ ಮತ್ತು ಸಿದ್ದಮ್ಮಳಿಗೆ ಮಕ್ಕಳಿಲ್ಲದೇ ಇಲ್ಲದ ಕಾರಣ ನಾರಾಯಣಪ್ಪ ಮತ್ತು ಮಾದಪ್ಪನ ಆಸ್ತಿಗೆ ವಾದಿಯೇ ವಾರಸುದಾರಳಾಗಿರುತ್ತಾಳೆ ಎಂದರೆ ಸರಿಯಲ್ಲ.

ನನ್ನ ತಂದೆಯ ಹೆಸರು ರಾಮಪ್ಪ. ರಾಮಪ್ಪನವರ ತಂದೆಯ ಹೆಸರು ಮಾದಪ್ಪ. ಮಾದಪ್ಪನವರ ಸಾಕು ಮಗ ರಾಮಪ್ಪ ಎಂದು ತೋರಿಸಲು ನಾನು ಅವರ ಯಾವುದೇ ಶಾಲಾ ದಾಖಲಾತಿಗಳು ಅಥವಾ ಇತರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಶಾಲಾ ದಾಖಲಾತಿಗಳನ್ನು ಕೊಟ್ಟಿಲ್ಲ, ಆದರೆ ಬೇರೆ ದಾಖಲಾತಿಗಳನ್ನು ಕೊಟ್ಟಿದ್ದೇನೆಂದು ಹೇಳುತ್ತಾರೆ. ನಿಮ್ಮ ತಕರಾರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ರಾಮಪ್ಪನವರು ಸಿದ್ದಮ್ಮನ ಅಕ್ಕನ ಮಗ ಎಂದು ಹೇಳಿದ್ದು, ಸಿದ್ದಮ್ಮನ ಅಕ್ಕನ ಹೆಸರು ಏನು? ಎಂದರೆ ಗೊತ್ತಿಲ್ಲ. ಅದೇರೀತಿ ಸಿದ್ದಮ್ಮನ ಅಕ್ಕನ ಗಂಡನ ಹೆಸರು ಗೊತ್ತಾ? ಎಂದರೆ ಇಲ್ಲ.

ದಾವಾ ಆಸ್ತಿಗಳ ಪೈಕಿ ಯಾವುದಾದರು ಅಸ್ತಿಯು ಮುನಿಯಲ್ಲಮ್ಮನ ಕಡೆಯಿಂದ ಬಂದಿದೆ ಎಂದು ಏನಾದರು ದಾಖಲೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ನಾನು ಹಾಜರುಪಡಿಸಿದ ಐ.ಎಲ್ ಮತ್ತು ಆರ್.ಆರ್ ಪ್ರಕಾರ ಕೆಲವು ಆಸ್ತಿಗಳು ನಾರಾಯಣಪ್ಪ–ಮುನಿಯಮ್ಮ ಅಲಿಯಾಸ್ ಮುನಿಯಲ್ಲಮ್ಮನವರ ಕಡೆಯಿಂದ ಬಂದಿದೆ ಎಂದು ಹೇಳುತ್ತವೆ ಎಂದರೆ ಸರಿಯಲ್ಲ. ಮಾದಪ್ಪನವರು **6** ನೇ ತರಗತಿಯ ತನಕ ವಿದ್ಯಾಭ್ಯಾಸ ಮಾಡಿದ್ದರು. ಮಾದಪ್ಪನವರು ವ್ಯವಸಾಯ ವೃತಿಯನ್ನು ಮಾಡುತ್ತಿದ್ದರು ಎಂದರೆ ಸರಿ. ನಾನು ಪಿತ್ರಾರ್ಜಿತ ಆಸ್ತಿಗಳ ಆಧಾಯದಿಂದ ಮಾದಪ್ಪನವರು ಕೆಲವು ಆಸ್ತಿಗಳನ್ನು ಖರೀದಿಸಿದಾರೆಂದು ಹೇಳಿದ್ದೇನೆಂದರೆ ಸರಿ. ಸದರಿ ಆಸ್ತಿಗಳೇ ಈ ದಾವಾ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳು ನಾರಾಯಣಪ್ಪ ಮತ್ತು ಮಾದಪ್ಪನವ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಆದರೆ ಕೇವಲ ಮಾದಪ್ಪನ ಕುಟುಂಬದ ಆಸ್ತಿಗಳಾಗಿರುತ್ತವೆ. ಮಾದಪ್ಪನಿಗೆ ಮಕ್ಕಳಿಲ್ಲದೇ ಇರುವ ಕಾರಣ ವಾದಿಯೇ ದಾವಾ ಆಸ್ತಿಗೆ ಮಾಲೀಕರಾಗುತ್ತಾರೆಂದರೆ ಸರಿಯಲ್ಲ. ದಾವಾ ಆಸಿಗಳಿಗೂ ನಮಗೂ ಯಾವುದೇ

ಸಂಬಂಧ ಇಲ್ಲದಿದ್ದರೂ ಕೂಡ ನಾವು ಕಾನೂನು ಬಾಹಿರವಾಗಿ ಮಾಡಿಕೊಂಡ ಖಾತೆಯು ವಾದಿಗೆ ಬಂದನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಿನಾಂಕಃ**16.01.1984** ಮತ್ತು **05.09.1997** ರ ವಿಲ್ ಗಳನ್ನು ಮಾದಪ್ಪ ಮತ್ತು ಸಿದ್ದಮ್ಮನವರು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ವುತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ಮಾದಪ್ಪ ಮತ್ತು ಸಿದ್ದಮ್ಮನವರಿಗೆ ವಿಲ್ ಮಾಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಮಾದಪ್ಪನವರು ದಿನಾಂಕಃ**31.12.2005** ರಲ್ಲಿ ಮೃತಪಟ್ಟಿದ್ದಾರೆಂದರೆ ಸರಿ. ಸದರಿ ವಿಲ್ ಗಳ ಆಧಾರದ ಮೇಲೆ ನಾನು ಯಾವುದೇ Succession certificate ಮತ್ತು Probate ಅನ್ನು ನ್ಯಾಯಾಲಯದಲ್ಲಿ ಪಡೆದುಕೊಂಡಿಲ್ಲ ಎಂದರೆ ಸರಿ. ಎಂ.ಆರ್ ಮತ್ತು ಪಹಣಿಗಳಲ್ಲಿ ವೈಯಕ್ತಿಕ ಪತ್ರ ಮತ್ತು ವಿಭಾಗದ ಆಧಾರದ ಮೇಲೆ ಖಾತೆ ವರ್ಗಾವಣೆಯಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ಯಾರ ಯಾರ ನಾಡುವೆ ವಿಭಾಗವಾಗಿದೆ ಎಂದು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರ ನಡುವೆ ವಿಭಾಗವಾಗಿರುತ್ತದೆ. ನಾನು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ **2011** ರ ತನಕ ದಾವಾ ಆಸ್ತಿಯ ಖಾತೆಯು ಮಾದಪ್ಪನವರ ಹೆಸರಿಲ್ಲಿ ಇತ್ತು ಎಂದರೆ ಸರಿ. ನಾನು ಹಾಜರುಪಡಿಸಿದ ವಿಲ್**,** ಲಿಖಿತ ಹೇಳಿಕೆ ಮತ್ತು ಪ್ರಮಾಣಪತ್ರದಲ್ಲಿ ನನ್ನ ತಂದೆಯು ಮಾದಪ್ಪನವರ ಸಾಕು ಮಗ ಎಂದು ನಮೂದಾಗಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆಯು ಮಾದಪ್ಪನವರ ಸಾಕು ಮಗ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಯು ನಾರಾಯಣಪ್ಪ ಮತ್ತು ಮಾದಪ್ಪನವರು ಕಾನೂನು ಬದ್ದ ವಾರಸುದಾರರಾಗಿರುವುದರಿಂದ **1** ರಿಂದ **3** ನೇ ಪ್ರತಿವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯ

ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೇವೆಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ವಾಟಿ ಸವಾಲಿಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.